ದಿನಾಂಕ 19.01.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಕೆ.ಎನ್.ಎಸ್., ವಕೀಲರಿಂದಃ-

ಅರ್ಜಿದಾರರಿಗೆ ಮೊದಲಿಗೆ ನಮ್ಮ ಆಸ್ಪತ್ರೆಯಲ್ಲಿ ನಾನೇ ಚಿಕಿತ್ಸೆ ನೀಡಿರುವುದು ಎನ್ನುವುದು ನಿಜ. ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಅರ್ಜಿದಾರರಿಗೆ ಸಂಬಂಧಿಸಿದ ಸಂಪೂರ್ಣ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎನ್ನುವುದು ನಿಜ. ನಮ್ಮ ಆಸ್ಪತ್ರೆಯಲ್ಲಿ ಎಂ.ಎಲ್.ಸಿ ಹಾಗೂ ಪೊಲೀಸ್ ಇಂಟಿಮೇಷನ್ ಕುರಿತು ರಿಜಿಸ್ಟರ್‌ಗಳನ್ನು ಇರಿಸಲಾಗಿರುತ್ತದೆ ಎನ್ನುವುದು ನಿಜ. ಈ ಪ್ರಕರಣದ ಅಪಘಾತಕ್ಕೆ ಸಂಬಂಧಿಸಿದ ಪೊಲೀಸ್ ಇಂಟಿಮೇಷನ್ ಪ್ರತಿ ಒಳರೋಗಿ ಕೇಸ್ ಶೀಟ್‌ನಲ್ಲಿ ಹಾಜರುಪಡಿಸಲಾಗಿದ್ದು, ಎಂ.ಎಲ್.ಸಿ ಎಕ್ಸ್ಟ್ರಾಕ್ಟನ್ನು ಹಾಜರುಪಡಿಸಿಲ್ಲ. ನಿಪಿ-9ರ ಪ್ರಕಾರ ಅರ್ಜಿದಾರರು ನಮ್ಮ ಆಸ್ಪತ್ರೆಗೆ ರಾತ್ರಿ 8.00 ಗಂಟೆ ಸುಮಾರಿಗೆ ದಾಖಲಾಗಿರುತ್ತಾರೆ. ಒಂದೇ ಅಪಘಾತಕ್ಕೆ ಸಂಬಂಧಿಸಿದ ಗಾಯಾಳುಗಳು ನಮ್ಮ ಆಸ್ಪತ್ರೆಗೆ ದಾಖಲಾದ ಸಂದರ್ಭದಲ್ಲಿ ಒಬ್ಬೊಬ್ಬ ಗಾಯಾಳುವಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಪೊಲೀಸ್ ಇಂಟಿಮೇಷನನ್ನು ನೀಡಲಾಗುತ್ತದೆ. ಅರ್ಜಿದಾರರಿಗೆ ಸಂಬಂಧಿಸಿದ ಎಂ.ಎಲ್.ಸಿ ಎಕ್ಸ್ಟ್ರಾಕ್ಟನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ವೈದ್ಯಕೀಯ ದಾಖಲೆಗಳ ಪ್ರಕಾರ ಅರ್ಜಿದಾರರಿಗೆ 60 ವರ್ಷ ವಯಸ್ಸಾಗಿತ್ತು? ಎಂದರೆ ಸಾಕ್ಷಿಯು ವೈದ್ಯಕೀಯ ದಾಖಲೆಗಳಲ್ಲಿ ಅವರ ವಯಸ್ಸು 49 ವರ್ಷ ಎಂದು ದಾಖಲಾಗಿದೆ ಎಂದು ನುಡಿಯುತ್ತಾರೆ. ಡಿಸ್ಚಾರ್ಜ್ ಸಮ್ಮರಿಯ ಪ್ರಕಾರ ಅರ್ಜಿದಾರರು ದಿನಾಂಕ 18.06.2022 ರಂದು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದರು ಎನ್ನುವುದು ನಿಜ. ಅರ್ಜಿದಾರರಿಗೆ ಫಿಜಿಯೋಥೆರಪಿ ಪಡೆದುಕೊಳ್ಳುವಂತೆ ಬಿಡುಗಡೆ

ಸಮಯದಲ್ಲಿ ಸೂಚಿಸಲಾಗಿದ್ದು ಅದರಂತೆ ಅವರು ನಮ್ಮ ಆಸ್ಪತ್ರೆಯಲ್ಲಿ ಫಿಜಿಯೋಥೆರಪಿ ಪಡೆದುಕೊಂಡಿರುತ್ತಾರೆ. ಫಿಜಿಯೋಥೆರಪಿ ಪಡೆದುಕೊಳ್ಳುವ ಸಂದರ್ಭದಲ್ಲಿ ಎಕ್ಸರೇ ತೆಗೆಯುವ ಅವಶ್ಯಕತೆ ಇರುತ್ತದೆ. ಅರ್ಜಿದಾರರನ್ನು ನಾನು ದಿನಾಂಕ 12.10.2023 ರಂದು ಪರೀಕ್ಷಿಸಿರುತ್ತೇನೆ. ಆಗಲೂ ಸಹ ನಾನು ಅರ್ಜಿದಾರರ ಎಕ್ಸರೇ ಮಾಡಿದ್ದು ಅದರ ಪ್ರಕಾರ ಅವರ ಮೂಳೆ ಮುರಿತ ಕೂಡಿಕೊಂಡಿರುತ್ತದೆ ಎನ್ನುವುದು ನಿಜ. ಅರ್ಜಿದಾರರ ಅಂಗನ್ಯೂನತೆಯನ್ನು ಪರಿಶೀಲಿಸುವ ಸಂದರ್ಭದಲ್ಲಿ ಕಾಣಿಸಲಾದ ಸಮಸ್ಯೆಗಳು ವಯೋಸಹಜವಾದದ್ದು ಎನ್ನುವುದು ಸರಿಯಲ್ಲ. ಅರ್ಜಿದಾರರಿಗೆ ಅಳವಡಿಸಲಾದ ಒಳಜೋಡಣೆಯನ್ನು ತೆರೆಯಲಾಗಿಲ್ಲ. ಒಳಜೋಡಣೆಗಳನ್ನು ತೆರೆಯದ ಕಾರಣದಿಂದಲೂ ಅವರ ಚಲನವಲನಗಳಲ್ಲಿ ನಿರ್ಬಂಧವಿರಬಹುದು ಎನ್ನುವುದು ನಿಜ. ಅದೇ ಕಾರಣದಿಂದ ಅವರ ಅಂಗನ್ಯೂನತೆಯು ಹೆಚ್ಚಿನ ಪ್ರಮಾಣದಲ್ಲಿ ಇರಬಹುದು ಎನ್ನುವುದು ಸರಿಯಲ್ಲ. ಅರ್ಜಿದಾರರ ಮೂಳೆ ಮುರಿತ ಕೂಡಿಕೊಂಡಿದ್ದರೂ ಸಹ ಅವರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಹೆಚ್ಚಿನ ಅಂಗನ್ಯೂನತೆಯ ಪ್ರಮಾಣವನ್ನು ಕಾಣಿಸಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.